ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 195-198
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಚಿಕ್ಕಮಗಳೂರು ಜಿಲ್ಲೆಯ ಅಮೃತಮಹಲ್ ಕಾವಲುಗಳು: ಒಂದು ಅವಲೋಕನ

**ಡಾ. ಎಸ್. ಹರೀಶ್ ಕುಮಾರ್**
ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀರೂರು.

***Abstract:***

*ವಿಜಯನಗರ ಸಾಮ್ರಾಜ್ಯ ಪತನ ನಂತರದಲ್ಲಿ ಶ್ರೀರಂಗಪಟ್ಟಣದಲ್ಲಿ ವಿಜಯನಗರದ ವೈಸ್ರಾಯ್ ಅವರ ಕರೋಹಟ್ಟಿ ಮಂದಿಯಲ್ಲಿ ಕಾವಲು ದನಗಳು ಸೇರಿದ ಗೋತಳಿ ಸೃಷ್ಟಿಯಾಗಿತ್ತು ಹಾಲಿನಷ್ಟೇ ಬಿಳುಪಾಗಿದ್ದ ಈ ರಾಸುಗಳನ್ನು ಮೈಸೂರು ಅರಸರ ಆಳ್ವಿಕೆಯಲ್ಲಿ "ಬೆಣ್ಣೆ ಚಾವಡಿ" ಎಂದು ಕರೆಯುತ್ತಿದ್ದರು. ಅರಮನೆಗೆ ಇವುಗಳಿಂದಲೇ ಹಾಲು ಬೆಣ್ಣೆ ಪೂರೈಕೆ ಆಗುತ್ತಿತ್ತು. ತೀಕ್ಷ್ಣ ಬುದ್ಧಿ, ನಡಿಗೆಯಲ್ಲಿನ ವಿಶೇಷತೆ, ಗಟ್ಟಿತನದಿಂದ ಇವು ಹೆಚ್ಚು ಪ್ರಸಿದ್ಧಿ ಪಡೆದಿದ್ದವು. ರಾಸುಗಳು ಬಿಳಿ ಇದ್ದರು ಹೋರಿಗಳು ಮಾತ್ರ ಕಂದು ಮಿಶ್ರಿತ ಕಪ್ಪು ಬಣ್ಣ ಹೊಂದಿದ್ದವು. ಲಕ್ಷಗಟ್ಟಲೆ ಇದ್ದ ಇವುಗಳ ನಿರ್ವಹಣೆ, ಮೇವಿಗಾಗಿ ಚಿಕ್ಕದೇವರಾಜ ಒಡೆಯರು ವಿಶೇಷ ಆಸಕ್ತಿವಹಿಸಿ ಮೈಸೂರು ಸಂಸ್ಥಾನಕ್ಕೆ ಸೇರಿದ ಜಿಲ್ಲೆಗಳಲ್ಲಿ ಕಾವಲು ರೂಪದಲ್ಲಿ ಭೂಮಿ ಒದಗಿಸಿದ್ದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಆಳ್ವಿಕೆಗೆ ಮೈಸೂರು ಸಂಸ್ಥಾನ ಒಳಪಟ್ಟಾಗ ದಷ್ಟಪುಷ್ಟವಾಗಿದ್ದ ಹಾಲಿನಂತೆ ಬಿಳುಪಾಗಿದ್ದ ಈ ರಾಸುಗಳಿಗೆ "ಅಮೃತ್ ಮಹಲ್" ಎಂದು ನಾಮಕರಣ ಮಾಡಲಾಯಿತು. ಬಲಿಷ್ಠವಾಗಿದ್ದ ಅಮೃತ್ ಮಹಲ್ ರಾಸುಗಳನ್ನು ಹೈದರಾಲಿ ಮತ್ತು ಟಿಪ್ಪು ಯುದ್ಧ ಸಾಮಗ್ರಿಗಳನ್ನು ಸಾಗಿಸಲು ಫಿರಂಗಿಗಳನ್ನು ಎಳೆಯಲು ಬಳಸುತ್ತಿದ್ದರು. ಯುದ್ಧಕಾಲದಲ್ಲಿ ಈ ರಾಸುಗಳ ಕೋಡುಗಳಿಗೆ ಮಂಜು ಕಟ್ಟಿ ಶತ್ರು ಪಾಳ್ಯದ ಮೇಲೆ ನುಗ್ಗಿಸುತ್ತಿದ್ದರು. ಬಲಶಾಲಿ ಭುಜ ಹೊಂದಿರುವ 15 ರಿಂದ 16 ಗಂಟೆಗಳ ಕಾಲ ದಣಿವರಿಯದೇ ದುಡಿಯುವ ಅಮೃತ್ ಮಹಲ್ ರಾಸುಗಳು ಕೃಷಿ ಚಟುವಟಿಕೆಗೆ ಹೆಚ್ಚು ಉಪಯುಕ್ತವಾಗಿವೆ. ಇವುಗಳಿಗೆ ದೇಶದಾದ್ಯಂತ ಬೇಡಿಕೆ ಹೆಚ್ಚಾಗಿದ್ದು ಅಮೃತ್ ಮಹಲ್ ಹೋರಿಗಳ ಹರಾಜಿನಿಂದ ಪ್ರತಿ ವರ್ಷ ಲಕ್ಷಾಂತರರೂ ಆದಾಯ ಬರುತ್ತಿದೆ. ಪ್ರಸ್ತುತ ಲೇಖನದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಅಮೃತ ಮಹಲ್ ಕಾವಲುಗಳ ಕುರಿತು ಪ್ರಸ್ತಾಪಿಸಲಾಗಿದೆ.*

***Keywords:*** *ಅಮೃತ್ ಮಹಲ್, ಕಾವಲು,ತಳಿ, ಅರಸರ ಕಾಲ, ಗೋವು.*

**ಪೀಠಿಕೆ**

ಪ್ರಾಚೀನ ಕಾಲದಿಂದ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದ ಚಿಕ್ಕಮಗಳೂರು ಜಿಲ್ಲೆಗೆ ತನ್ನದೇ ಆದಂತಹ ಐತಿಹಾಸಿಕ ಹಿನ್ನೆಲೆ ಇದೆ. ಕ್ರಿ.ಶ. 5ನೇ ಶತಮಾನದಿಂದ 19ನೇ ಶತಮಾನದವರೆಗೆ ವಿವಿಧ ಮನೆತನಗಳಾದ ಕದಂಬ, ಗಂಗ, ನೊಳಂಬ, ಸಾಂತರರು, ದಯನಲ್ಲ, ಸೇನಾವಾರ, ಚಾಲುಕ್ಯ, ಚೋಳ, ಹೊಯ್ಸಳ, ಕಳಸ, ಕಾರ್ಕಳ, ಬಲಂ, ಬಸವಾಪಟ್ಟಣ ಮುಖ್ಯರು, ವಿಜಯನಗರ, ಕೆಳದಿ, ಇಕ್ಕೇರಿ, ಶೃಂಗೇರಿ ಜಾಗಿರ್, ತರೀಕೆರೆಯ ಪಾಳೆಯಗಾರರು, ಸಂತೆಬೆನ್ನೂರು ಫಲಹಾರ ಮಠ, ಮೈಸೂರು ಒಡೆಯರು, ಹೈದರಾಲಿ-ಟಿಪ್ಪುಸುಲ್ತಾನರ ಆಳ್ವಿಕೆಯ ಅವಧಿಯಲ್ಲಿ ಪ್ರತ್ಯಕ್ಷ-ಪರೋಕ್ಷ ಆಳ್ವಿಕೆಯಪ್ರಭಾವಕ್ಕೆ ಚಿಕ್ಕಮಗಳೂರು ಜಿಲ್ಲೆಒಳಪಟ್ಟಿತ್ತು.

***Please cite this article as:*** ಹರೀಶ್ ಕುಮಾರ್ ಎಸ್. (2023). ಚಿಕ್ಕಮಗಳೂರು ಜಿಲ್ಲೆಯ ಅಮೃತಮಹಲ್ ಕಾವಲುಗಳು: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 195–198.

ಅಮೃತಮಹಲ್ ಹಸುವಿನ ತಳಿಯ ಬೆಳವಣಿಗೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ತನ್ನದೇ ಆದಂತಹ ಕೊಡುಗೆ ನೀಡಿದೆ. 500ವರ್ಷಗಳಿಗೂ ಹೆಚ್ಚಿನ ಇತಿಹಾಸವಿರುವ ಅಮೃತಮಹಲ್ ಹಸುವಿನ ಕುರಿತು ದೇವಾಲಯಗಳ ಸೇವೆಗೆಂದೇ ಗೋವುಗಳ ತಳಿಗೆ ಚೋಳರು ಹೊಯ್ಸಳರ ಕಾಲದ ಶಾಸನಗಳಲ್ಲಿ ದಾನಬಿಟ್ಟ ಉಲ್ಲೇಖ ಕಂಡುಬರುತ್ತದೆ.

ವಿಜಯನಗರದ ಅರಸರ ಕಾಲದಲ್ಲಿ ಪಶುಸಂಗೋಪನೆ ಇಲಾಖೆ ಯನ್ನು "ಕರುಹಟ್ಟಿ" ಎಂದು ಕರೆಯಲಾಗುತ್ತಿತ್ತು. ವಿಜಯನಗರ ಅರಸರ ಕಾಲದ ಉತ್ತಮ ತಳಿಯ ಹಸುಗಳನ್ನು ಶ್ರೀರಂಗಪಟ್ಟಣಕ್ಕೆ ತರಲಾಯಿತು. ನಂತರದ ದಿನಗಳಲ್ಲಿ ವಿಜಯನಗರದ ಪ್ರಭಾವದೊಂದಿಗೆ ಮೈಸೂರಿನ ಒಡೆಯರ್ ಕಾಲದಲ್ಲಿ (ಕ್ರಿ.ಶ. 1572 –1636) ಈ ತಳಿ ಇನ್ನಷ್ಟು ಅಭಿವೃದ್ಧಿ ಹೊಂದಿತ್ತು. ಚಿಕ್ಕದೇವರಾಜ ಒಡೆಯರ್ ಕಾಲದ 18 ಇಲಾಖೆಗಳಲ್ಲಿ ಒಂದಾಗಿದ್ದ ಬೆಣ್ಣೆ ಚಾವಡಿಗೆ ಮಹತ್ವ ಬಂದಿದ್ದು ಅಮೃತ್ ಮಹಲ್ ನಿಂದ ಎಂಬುದು ಗಮನಾರ್ಹ. ಅಲ್ಲದೆ ಟಿಪ್ಪು ಸುಲ್ತಾನ್ ಕಾಲದಲ್ಲಿ ಬೆಣ್ಣೆ ಚಾವಡಿ "ಅಮೃತ್ ಮಹಲ್"ಎಂಬ ಹೆಸರು ಪಡೆಯಿತು.

ದಿವಾನರಾಗಿದ್ದ ಪೂರ್ಣಯ್ಯ ಈ ತಳಿಯ ಹಸುಗಳನ್ನು ತಮಿಳುನಾಡಿನಲ್ಲೂ ಬೆಳೆಸಲು ಪ್ರೋತ್ಸಾಹಿಸಿದ್ದಕ್ಕೆ ತಮಿಳುನಾಡಿನಲ್ಲಿ ಅಮೃತ್ ಮಹಲ್ ತಳಿಯ ಹಸುಗಳಿಗೆ "ಪೂರ್ಣಯ್ಯನದನ"ಗಳೆಂದು ಹೆಸರು ಬಂದಿತ್ತು.

ವಸಾಹತುಶಾಹಿ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಕೆಲಸಗಾರ ವರ್ಗಕ್ಕೆ ಸೇರಿದ ಅಮೃತ್ ಮಹಲ್ ತಳಿಯ ದನಗಳನ್ನು ಹಾಲು, ಕೃಷಿ ಮತ್ತು ಯುದ್ಧಗಳಲ್ಲಿ ಬಳಸಲು ಬಿಟಿಷರು ಅಭಿವೃದ್ಧಿಪಡಿಸಿದರು. ಹಸುಗಳಿಗೆ 143 ಕಾವಲುಗಳನ್ನು ನಿರ್ಮಿಸಿ ಅವುಗಳ ಉಸ್ತುವಾರಿಯನ್ನು ಅಂದಿನ ಬ್ರಿಟಿಷ್ ಸರ್ಕಾರದ ಮಿಲಿಟರಿ ಸಹಾಯಕರಿಗೆ ನೀಡಲಾಯಿತು.

ಮೈಸೂರುಅರಸರು, ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಕಾಲದಲ್ಲಿ ಈ ತಳಿಗಳಲ್ಲಿ "ಬಂಜಾರದಳ" ಎಂಬುದು ಪ್ರಮುಖವಾಗಿತ್ತು. 237 ಅಮೃತಮಹಲ್ ತಳಿಯ ಎತ್ತುಗಳು 3000ದಷ್ಟು ಹೈದರಾಬಾದ್ ಸೈನ್ಯವನ್ನು ಸೋಲಿಸಿದ ಬಗ್ಗೆ ಉಲ್ಲೇಖವಿದೆ.

ಮೈಸೂರು ಸಂಸ್ಥಾನವು ಸುಮಾರು 50 ವರ್ಷಗಳ ಕಾಲ (ಕ್ರಿ.ಶ.1831–1881) ಬ್ರಿಟಿಷ್ ಕಮೀಷನರುಗಳ ಆಳ್ವಿಕೆಗೆ ಒಳಪಟ್ಟಿತ್ತು. ಅಮೃತಮಹಲ್ ತಳಿ ಸಂವರ್ಧನೆಗೆ ಮೈಸೂರು ಅರಸರ ಕಾಲದಲ್ಲಿ 1915–16 ಸಮಯದಲ್ಲಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಮತ್ತು ಮಂಡ್ಯ ಜಿಲ್ಲೆಗಳಲ್ಲಿ 3,95,062 ಎಕರೆ ಜಾಗ ಮೀಸಲಿಡಲಾಗಿತ್ತು. ಪ್ರಸ್ತುತ ರಾಜ್ಯದ ಆರು ಜಿಲ್ಲೆಗಳ 18 ತಾಲೂಕುಗಳಲ್ಲಿ 59 ಅಮೃತ್ ಮಹಲ್ ಕಾವಲುಗಳಿವೆ.

ಈ ಅವಧಿಯಲ್ಲಿ ಅರಣ್ಯ ಮತ್ತು ಹುಲ್ಲುಗಾವಲಿನಿಂದ ಕೂಡಿದ್ದ ಪ್ರದೇಶವಾಗಿದ್ದ ಚಿಕ್ಕಮಗಳೂರು ಜಿಲ್ಲೆ ಬ್ರಿಟಿಷ್ ಸೈನ್ಯಕ್ಕೆ ಅಮೃತಮಹಲ್ ತಳಿಯ ಗೋವುಗಳನ್ನು ಒದಗಿಸುವ ಕೇಂದ್ರವಾಗಿತ್ತು. ಅದಕ್ಕಾಗಿ ಸಾರ್ವಜನಿಕ ರಾಸುಗಳ ಇಲಾಖೆ ಮತ್ತು ತರಬೇತಿ ಕೇಂದ್ರವನ್ನು (ಪಬ್ಲಿಕ್ ಕ್ಯಾಟಲ್ ಡಿಪಾರ್ಟ್ಮೆಂಟ್ ಅಂಡ್ ಟ್ರೈನಿಂಗ್ ಡಿಪಾರ್ಟ್ಮೆಂಟ್) ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅಜ್ಜಂಪುರದಲ್ಲಿ ಸ್ಥಾಪಿಸಲಾಗಿತ್ತು.

ದನಗಳ ಮೇವಿಗಾಗಿ ಮೀಸಲಾಗಿಟ್ಟ ಗೋಮಾಳಗಳನ್ನು "ಕಾವಲುಗಳು" ಎಂದು ಕರೆಯಲಾಗುತ್ತಿತ್ತು. ಈ ರೀತಿ ಮೇವಿಗಾಗಿ ಮೀಸಲಾಗಿಟ್ಟ ಚಿಕ್ಕಮಗಳೂರು ಜಿಲ್ಲೆ ಕಾವಲುಗಳೆಂದರೆ:

ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆ ತಾಲೂಕಿನ ಅಜ್ಜಂಪುರದ ಅಮೃತ ಮಹಲ್ ತಳಿ ಸಂವರ್ಧನೆ ಕೇಂದ್ರ ಸೇರಿದಂತೆ ಒಟ್ಟು 13 ಅಮೃತ ಮಹಲ್

ಕಾವಲುಗಳಿವೆ ಹಾಗೂ ಈ ಎಲ್ಲಾ ಕಾವಲುಗಳು ಒಟ್ಟಾರೆ14,339 ಎಕರೆ ಜಮೀನನ್ನು ಹೊಂದಿವೆ.

**ಪರ್ವತ ರಾಯನ ಕೆರೆ ಕಾವಲು**

ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲೂಕು ಅಜ್ಜಂಪುರದಲ್ಲಿ ಅಮೃತ ಮಹಲ್ ತಳಿ ಸಂವರ್ಧನಾ ಕೇಂದ್ರ ಇದ್ದು 1929ರಲ್ಲಿ ಪ್ರಾರಂಭವಾಗಿರುತ್ತದೆ. ಇಲ್ಲಿ ವಿಶ್ವ ಪ್ರಸಿದ್ಧ ಅಮೃತ ಮಹಲ್ ರಾಸುಗಳನ್ನು ಪೋಷಣೆ ಮಾಡಿ ಸಂವರ್ಧನೆ ಮತ್ತು ಸಂರಕ್ಷಣೆ ಮಾಡಲಾಗುತ್ತದೆ. ಸರ್ವೆ ನಂಬರ್ 15 ರಲ್ಲಿ 794.28 ಎಕರೆ ವಿಸ್ತೀರ್ಣ ಹೊಂದಿರುತ್ತದೆ. ಕಾವಲಿನ ವಿಸ್ತೀರ್ಣದೊಳಗೆ 100 ಎಕರೆ ಪ್ರದೇಶದಲ್ಲಿ ಪರ್ವತ ರಾಯನ ಕೆರೆ ಇದ್ದು ಜಾನುವಾರಗಳಿಗೆ ಸ್ವಾಭಾವಿಕವಾದ ಕುಡಿಯುವ ನೀರಿನ ಮೂಲವಾಗಿದೆ.

**ಬಗ್ಗವಳ್ಳಿ ಕಾವಲು**

ಬಗ್ಗವಳ್ಳಿ ಅಮೃತ ಮಹಲ್ ಕಾವಲು ಅಜ್ಜಂಪುರ ಕೇಂದ್ರದಿಂದ ಸುಮಾರು 5 ಕಿ.ಮೀ ದೂರದಲ್ಲಿದ್ದು ಸರ್ವೆ ನಂಬರ್ 1ರಲ್ಲಿ 403.39 ಎಕರೆ ಭೂಮಿ ಇರುತ್ತದೆ. ಸದರಿ ಕಾವಲಿನಲ್ಲಿ ಸುಮಾರು 194.28 ಎಕರೆ ಅನಧಿಕೃತ ಒತ್ತುವರಿ ಆಗಿದ್ದು ಅದರಲ್ಲಿ 100 ಎಕರೆಯನ್ನು ತೆರವುಗೊಳಿಸಲಾಗಿರುತ್ತದೆ. ಇಲ್ಲಿ ಅಜ್ಜಂಪುರ ಕೇಂದ್ರದ ರಾಸುಗಳನ್ನು ಋತುಮಾನಕ್ಕೆ ಅನುಗುಣವಾಗಿಮೇಯಿಸಲಾಗುತ್ತದೆ.

**ಸಾವೆ ಮರಡಿ ಕಾವಲು**

ಈ ಕಾವಲು ಅಜ್ಜಂಪುರದಿಂದ 10ಕಿ.ಮೀ ದೂರದಲ್ಲಿದ್ದು ಸರ್ವೆ ನಂ 1ರಲ್ಲಿ 200 ಎಕರೆ ಮತ್ತು ಸರ್ವೆ ನಂ2 ರಲ್ಲಿ 364.4 ಎಕರೆ ಒಟ್ಟು 564.04 ಎಕರೆ ವಿಸ್ತೀರ್ಣವನ್ನು ಹೊಂದಿರುತ್ತದೆ. ಸು. 43.33 ಎಕರೆ ಒತ್ತುವರಿಯಾಗಿರುತ್ತದೆ.

**ಸಂತೆ ದಿಬ್ಬ ಕಾವಲು**

ಈ ಕಾವಲು ಅಜ್ಜಂಪುರದಿಂದ 14ಕಿ.ಮೀ ದೂರದಲ್ಲಿದ್ದು 441.02 ಎಕರೆ ವಿಸ್ತೀರ್ಣ ಹೊಂದಿದೆ. 40.06 ಎಕರೆ ಒತ್ತುವರಿಯಾಗಿರುತ್ತದೆ.

**ಲಿಂಗದಹಳ್ಳಿ ಕಾವಲು**

ಈ ಕಾವಲು ತರೀಕೆರೆ ಚಿಕ್ಕಮಗಳೂರು ರಸ್ತೆಯಲ್ಲಿ ತರೀಕೆರೆಯಿಂದ ಸುಮಾರು 13 ಕಿ.ಮೀ ದೂರದಲ್ಲಿರುತ್ತದೆ. ಒಟ್ಟು 1410.08 ಎಕರೆ ವಿಸ್ತೀರ್ಣ ಹೊಂದಿರುತ್ತದೆ.

**ಬೀರೂರು ಕಾವಲು**

ಈ ಕಾವಲು ರಾಷ್ಟ್ರೀಯ ಹೆದ್ದಾರಿ 206ರಲ್ಲಿ ಕಡೂರು ಮತ್ತು ಬೀರೂರು ನಡುವೆ ಕಂಡುಬರುತ್ತದೆ. ಈ ಸರ್ವೇ ನಂ 4ರಲ್ಲಿ 861.38 ಎಕರೆ ವಿಸ್ತೀರ್ಣ ಹೊಂದಿದ್ದು, 29.17 ಎಕರೆ ಒತ್ತುವರಿಯಾಗಿರುತ್ತದೆ. ಅಜ್ಜಂಪುರ ಉಪ ಕೇಂದ್ರದಲ್ಲಿ ಹುಟ್ಟಿದ ಅಮೃತ್ ಮಹಲ್ ಗಂಡು ಕರುಗಳನ್ನು ಸ್ವೀಕರಿಸಿ ಇಲ್ಲಿ ಸಾಕಾಣಿಕೆ ಮಾಡಿ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಒಂದುವರೆಯಿಂದ ಎರಡು ವರ್ಷದ ಗಂಡು ಕರುಗಳನ್ನು ಬಹಿರಂಗ ಹರಾಜಿನ ಮೂಲಕ ಆಸಕ್ತ ರೈತರಿಗೆ ನೀಡಲಾಗುತ್ತದೆ. ಹಾಗೂ ಹರಾಜಿನಿಂದಬಂದ ಮೊತ್ತವನ್ನು ಸರ್ಕಾರದ ಖಜಾನೆಗೆ ಜಮಾ ಮಾಡಲಾಗುತ್ತದೆ.

**ಬಾಸೂರು ಅಮೃತ ಮಹಲ್**

ಬಾಸೂರು ಅಮೃತ ಮಹಲ್ ತಳಿ ಉಪ ಕೇಂದ್ರವು, ಕಡೂರು ತಾಲೂಕಿನಿಂದ 15 ಕಿ.ಮೀ ದೂರದಲ್ಲಿದೆ. ಸರ್ವೇ ನಂ 1 ರಲ್ಲಿ 1719.10 ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಸು39.7 ಎಕರೆ ಒತ್ತುವರಿಯಾಗಿದೆ.

**ಹಿರೇನಲ್ಲೂರು ಕಾವಲು**

ಕಡೂರು ತಾಲೂಕಿನಿಂದ ಸುಮಾರು 20 ಕಿ.ಮೀ ದೂರದಲ್ಲಿ ಈ ಕಾವಲು ಇದೆ. ಒಟ್ಟು 149.32 ಎಕರೆ ವಿಸ್ತೀರ್ಣ ಹೊಂದಿದ್ದು 21.16 ಎಕರೆ ಒತ್ತುವರಿಯಾಗಿರುತ್ತದೆ.

**ಬಿಳುವಾಲ ಕಾವಲು**

ಕಡೂರು ತಾಲೂಕಿನಿಂದ ಸುಮಾರು 15ಕಿ.ಮೀ ದೂರದಲ್ಲಿ ಬಿಳುವಾಲ ಅಮೃತ ಮಹಲ್ ಕಾವಲು ಇರುತ್ತದೆ. ಸರ್ವೇ ನಂ 34 ರಲ್ಲಿ 1234.21 ಎಕರೆ

ಇದ್ದು ಕಡಸು ಸಾಕಾಣಿಕೆ ಕೇಂದ್ರವಾಗಿ ಗುರುತಿಸಿಕೊಂಡಿದೆ. ಇದರಲ್ಲಿ 120.19 ಎಕರೆ ಒತ್ತುವರಿಯಾಗಿರುತ್ತದೆ.

**ಯಗಟಿ ತೊರೆಕಾವಲು**

ಕಡೂರು ಕೇಂದ್ರದಿಂದ 20 ಕಿ.ಮೀ ದೂರದಲ್ಲಿದ್ದು ಸರ್ವೆ ನಂ 1 ರಲ್ಲಿ 1001.01 ಎಕರೆ ವಿಸ್ತೀರ್ಣವಿರುತ್ತದೆ. ಇದರಲ್ಲಿ 64.25 ಎಕರೆ ಒತ್ತುವರಿಯಾಗಿರುತ್ತದೆ.

**ದೇವನೂರು ಕಾವಲು**

ಕಡೂರು ಕೇಂದ್ರದಿಂದ 20 ಕಿಲೋಮೀಟರ್ ದೂರದಲ್ಲಿ ಈ ಕಾವಲಿದ್ದು ಸರ್ವೆ ನಂಬರ್ ಒಂದರಲ್ಲಿ 414.35 ಎಕರೆ ವಿಸ್ತೀರ್ಣ ಹೊಂದಿದೆ. ಸು118.25 ಎಕರೆ ಒತ್ತುವರಿಯಾಗಿರುತ್ತದೆ.

**ಎಮ್ಮೆದೊಡ್ಡಿ ಕಾವಲು:**

ಕಡೂರಿನಿಂದ 10 ಕಿಲೋಮೀಟರ್ ದೂರದಲ್ಲಿದ್ದು ಸರ್ವೆ ನಂಬರ್ 70ರಲ್ಲಿ 49 ಎಕರೆ ವಿಸ್ತೀರ್ಣ ಹೊಂದಿದ್ದು, 3831.19 ಎಕರೆ ಒತ್ತುವರಿಯಾಗಿರುತ್ತದೆ.

**ಅಯ್ಯನಕೆರೆ ಕಾವಲು**

ಕಡೂರು ತಾಲೂಕಿನಿಂದ 20 ಕಿ.ಮೀ ದೂರದಲ್ಲಿದ್ದು ಸರ್ವೆ ನಂ1ರಲ್ಲಿ 420 ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಕಾವಲಿನ 200 ಎಕರೆ ಪ್ರದೇಶದಲ್ಲಿ ಅಯ್ಯನಕೆರೆ ಇರುತ್ತದೆ.

ಹೀಗೆ ಕರ್ನಾಟಕದ ಚಿಕ್ಕಮಗಳೂರುಜಿಲ್ಲೆಯು ಅಮೃತ ಮಹಲ್ ತಳಿಯ ಕಾವಲುಗಳನ್ನುಹೊಂದಿದ್ದು, ಅಮೃತಮಹಲ್ ತಳಿಯ ಬೆಳವಣಿಗೆಯಲ್ಲಿ ತನ್ನದೇ ಆದ ಕೊಡುಗೆ ನೀಡಿತ್ತುಎಂಬಅಂಶತಿಳಿದುಬರುತ್ತದೆ.

**ಪರಾಮರ್ಶನಗ್ರಂಥಗಳು**


- *ಅಮೃತ ಮಹಲ್ ನಿರ್ವಹಣೆಗೆ ಪ್ರಾಧಿಕಾರ ರಚನೆ.* (2017, ಫೆಬ್ರುವರಿ 16). ಪ್ರಜಾವಾಣಿ ದಿನಪತ್ರಿಕೆ.
- ಅಜ್ಜಂಪುರದ ಅಮೃತ ಮಹಲ್ ತಳಿ ಸಂವರ್ಧನೆ ಕೇಂದ್ರದ ಮಾಹಿತಿ.
- Amrit Mahal https://en.wikipedia.org/wiki/Amrit_Mahal
- *ಚಿಕ್ಕಮಗಳೂರು ಜಿಲ್ಲೆಯ ಗ್ಯಾಸೆಟಿಯರ್.* (1981). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- *ಹುಣಸೂರು ತಾಲೂಕು ಗ್ಯಾಸೆಟಿಯರ್.* (2011). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ಪಿರಿಯಾಪಟ್ಟಣ ತಾಲೂಕು ಗೆಜೆಟಿಯರ್ (2010). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.